## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: :641 (815)

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ :18-08-2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚೆಗೆ ಶಾಲೆ ಬಿಡುವ/ ವಿದ್ಯಾಭ್ಯಾಸ ಮೊಟಕುಗೊಳಿಸುವ ಮಕ್ಕಳ ಸಂಖ್ಯೆಯು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಕ್ಕಳು ಶಾಲೆ ಬಿಡಲು ಕಾರಣಗಳನ್ನು ಗುರುತಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಹೌದು<br><br>ಮಕ್ಕಳು ಶಾಲೆ ಬಿಡಲು ಜಿಲ್ಲಾವಾರು ಕಾರಣಗಳು ಈ ಕೆಳಕಂಡಂತಿರುತ್ತದೆ : |

| ಕ್ರ. ಸಂ | ಜಿಲ್ಲೆ | ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣಗಳು |
|---|---|---|
| 1 | ಬಾಗಲಕೋಟೆ | ಅರಿವಿನ ಕೊರತೆ, ಪೋಷಕರ ನಿರಾಸಕ್ತಿ |
| 2 | ಬಳ್ಳಾರಿ | ವಲಸೆ |
| 3 | ಬೆಳಗಾವಿ | ವಲಸೆ, ಪೋಷಕರ ನಿರಾಸಕ್ತಿ, ಬಡತನ, ಕುಟುಂಬಿಕ ಸಮಸ್ಯೆಗಳು |
| 4 | ಬೆಳಗಾವಿ ಚಿಕ್ಕೋಡಿ | ಮನೆಕೆಲಸ, ಪಟ್ಟಣದ ಆಕರ್ಷಣೆ, ಭಾಷಾ ಅಡೆತಡೆಗಳು |
| 5 | ಬೆಂಗಳೂರು ಗ್ರಾಮಾಂತರ | ಮನೆಕೆಲಸ, ವಲಸೆ, ಪ್ರೌಢಾವಸ್ಥೆ, ಕುಟುಂಬ ವಿವಾದ |
| 6 | ಬೆಂಗಳೂರು ಉತ್ತರ | ವಲಸೆ, ಅನಾರೋಗ್ಯ, ಅಲೆಮಾರಿಗಳು, ಕುಟುಂಬ |

| | | | | |
|---|---|---|---|---|
| | | | | ಸಹೋದರರ ಆರೈಕೆಗಾಗಿ ಸಂಪಾದನೆ, ದೂರದಲ್ಲಿರುವ ಶಾಲೆ |
| | | 7 | ಬೆಂಗಳೂರು ದಕ್ಷಿಣ | ತೇಲುವ ಜನಸಂಖ್ಯೆ, ಬಡತನ, ಇತರ ದೇಶಗಳು ಮತ್ತು ರಾಜ್ಯಗಳಿಂದ ವಲಸೆ |
| | | 8 | ಬೀದರ್ | ವಲಸೆ, ಪೋಷಕರನಿರಾಸಕ್ತಿ, ಮನೆಕೆಲಸ |
| | | 9 | ಚಾಮರಾಜನಗರ | ವಲಸೆ, ಸಮುದಾಯಗಳಲ್ಲಿ ಸಾಮಾಜಿಕ ತಡೆ, ಮನೆಕೆಲಸ |
| | | 10 | ಚಿಕ್ಕಬಳ್ಳಾಪುರ | ವಲಸೆ, ಅನಾರೋಗ್ಯ, ಕುಟುಂಬ ವಿವಾದ, ಮಗು/ಪೋಷಕರು, ಪೋಷಕರ ನಿರಾಸಕ್ತಿ |
| | | 11 | ಚಿಕ್ಕಮಗಳೂರು | ವಲಸೆ ಪೋಷಕರ ನಿರಾಸಕ್ತಿ, ಆರೋಗ್ಯ ಸಮಸ್ಯೆ. |
| | | 12 | ಚಿತ್ರದುರ್ಗ | ಮನಕೆಲಸ, ಪ್ರೌಢಾವಸ್ಥೆ, ವಲಸೆ, ತೀವ್ರ ದೈಹಿಕ ಅಂಗವೈಕಲ್ಯ, ಅನಾರೋಗ್ಯ, ಕೌಟುಂಬಿಕ ವಿವಾದ |
| | | 13 | ದಕ್ಷಿಣ ಕನ್ನಡ | ವಲಸೆ, ಪೋಷಕರು ಮತ್ತು ವಿದ್ಯಾರ್ಥಿಗಳು ನಿರಾಸಕ್ತಿ, ಅನಾರೋಗ್ಯಕರ, ಮರದಸಾಗಳಿಗೆ ಸೇರುವುದು |
| | | 14 | ಧಾರವಾಡ | ಆರ್ಥಿಕ ಕಾರಣ, ಕುಟುಂಬ ವಿವಾದಗಳು, ಆರೋಗ್ಯ ಸಮಸ್ಯೆ, ವಲಸೆ |
| | | 15 | ಗದಗ | ವಲಸೆ, ಮಕ್ಕಳ ನಿರಾಸಕ್ತಿ, ಪೋಷಕರ ನಿರಾಸಕ್ತಿ |
| | | 16 | ಹಾಸನ | ಹೆಚ್ಚಿನ ಪೋಷಕರು ವಲಸೆ ಹೋಗುತ್ತಿದ್ದಾರೆ, single |

| | | | | |
|---|---|---|---|---|
| | | | | parent, ಪೋಷಕರು ಮತ್ತು ಮಕ್ಕಳಿಬ್ಬರ ನಿರಾಸಕ್ತಿ |
| | | 17 | ಹಾವೇರಿ | ವಲಸೆ, ಕೌಟುಂಬಿಕ ಸಮಸ್ಯೆ |
| | | 18 | ಕಲಬುರಗಿ | ಇತರ ರಾಜ್ಯಗಳಿಗೆ ವಲಸೆ |
| | | 19 | ಕೊಡಗು | ವಲಸೆ, ಅನಾರೋಗ್ಯಕರ, ಮುಕ್ತ ಶಾಲೆ |
| | | 20 | ಕೋಲಾರ | ಕುಟುಂಬ ಕಲಹ, ಮಕ್ಕಳನಿರಾಸಕ್ತಿ, ವಲಸೆ |
| | | 21 | ಕೊಪ್ಪಳ | ಅರಿವಿನ ಕೊರತೆ, ಪೋಷಕರ ನಿರಾಸಕ್ತಿ |
| | | 22 | ಮಂಡ್ಯ | ವಲಸೆ, ಬಡತನ, single parent, ಪ್ರವೇಶ ಸಾಧ್ಯತೆ |
| | | 23 | ಮೈಸೂರು | ವಲಸೆ, ಕುಟುಂಬದ ಸಮಸ್ಯೆ ಮಿತಿಮೀರಿದ ವಯಸ್ಸು, single parent ಆರೈಕೆ, ಆರೋಗ್ಯ ಸಮಸ್ಯೆ |
| | | 24 | ರಾಯಚೂರು | ವಲಸೆ, ವಯಸ್ಸು ಮೀರುವಿಕೆ ಮತ್ತು ಬಡತನ |
| | | 25 | ರಾಮನಗರ | ವಲಸೆ, ಬಡತನ, ಮಕ್ಕಳ ನಿರಾಸಕ್ತಿ, ಅನಾರೋಗ್ಯಕರ ಮತ್ತು ಕುಟುಂಬ ವಿವಾದ |
| | | 26 | ಶಿವಮೊಗ್ಗ | ಪೋಷಕರ ಕಲಹ, ಆರೋಗ್ಯ ಕುಟುಂಬ ಸಮಸ್ಯೆಗಳು |
| | | 27 | ತುಮಕೂರು | ಕುಟುಂಬ ವಿವಾದ, ಮನೆಯ ಕೆಲಸ |
| | | 28 | ತುಮಕೂರು ಮಧುಗಿರಿ | ಬಡತನ, ಶಿಕ್ಷಣದ ಕೊರತೆ, ಹೆಣ್ಣು ಮಕ್ಕಳ ಸಮಸ್ಯೆ, ಆರೋಗ್ಯ ಸಮಸ್ಯೆಗಳು |
| | | 29 | ಉಡುಪಿ | ವಲಸೆ, ಕೌಟುಂಬಿಕ ಸಮಸ್ಯೆ |
| | | 30 | ಉತ್ತರ ಕನ್ನಡ | ಬಾಲಕಾರ್ಮಿಕ, ವಲಸೆ, ಕೌಟುಂಬಿಕ ವಿವಾದ, |

| | | |
|---|---|---|
| | | ಅಲೆಮಾರಿಗಳು, ಮದರಸ |
| 31 | ಉತ್ತರ ಕನ್ನಡ ಶಿರಸಿ | ಆರೋಗ್ಯ ಕುಟುಂಬ ಸಮಸ್ಯೆಗಳು, ವಲಸೆ, single parent |
| 32 | ವಿಜಯನಗರ | ವಲಸೆ, single parent |
| 33 | ವಿಜಯಪುರ | ಅರಿವಿನ ಕೊರತೆ, ಪೋಷಕರ ನಿರಾಸಕ್ತಿ |
| 34 | ಯಾದಗಿರಿ | ಬೆಂಗಳೂರು, ಹೈದರಾಬಾದ್, ಮುಂಬೈ ಮತ್ತು ಇತರ ರಾಜ್ಯಗಳಿಗೆ ವಲಸೆ |

| | | |
|---|---|---|
| ಆ) | ಶಾಲೆ ಬಿಡುವ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | **ಶಿಕ್ಷಣ ಇಲಾಖೆಯಿಂದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶೈಕ್ಷಣಿಕ ಮುಖ್ಯವಾಹಿನಿಗೆ ತರಲು ಕೈಗೊಳ್ಳುತ್ತಿರುವ ವಿವಿಧ ಕಾರ್ಯತಂತ್ರಗಳು**<br>• ಪ್ರತಿ ವರ್ಷ ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಹತ್ತಿರದ ಶಾಲೆಗಳಲ್ಲಿ ದಾಖಲಾತಿ ಆಂದೋಲನದ ಹಾಗೂ ಸಾಮಾನ್ಯ ದಾಖಲಾತಿ ಆಂದೋಲನದ ಮೂಲಕ ಮುಖ್ಯವಾಹಿನಿಗೆ ತರಲಾಗಿದೆ. ಅವರಿಗೆ ಬ್ರಿಡ್ಜ್ ಕೋರ್ಸ್ ಮತ್ತು ಪರಿಹಾರ ಬೋಧನೆಯ ಮೂಲಕ ಶಾಲಾ ಆಧಾರಿತ ತರಬೇತಿ (SBT) ನೀಡಲಾಗುವುದು ಮತ್ತು ಈ ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ತರಗತಿಗಳಿಗೆ ದಾಖಲಿಸಲಾಗುವುದು.<br>• ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಪ್ರವೇಶ ಅವಕಾಶವಿಲ್ಲದ ಪ್ರದೇಶಗಳಲ್ಲಿ ಹೊಸ ಸರ್ಕಾರಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತದೆ ಜೊತೆಗೆ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆ ಮತ್ತು ಪ್ರೌಢಶಾಲೆ ಶಾಲೆಗಳನ್ನು ಪದವಿ ಪೂರ್ವ ಕಾಲೇಜು (XI & XII ತರಗತಿ) ಗೆ ಉನ್ನತೀಕರಿಸಲಾಗುತ್ತದೆ. ಎಲ್ಲಾ |

| | | |
|---|---|---|
| | | ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಇದು ಒಂದು ನಿರ್ಣಾಯಕ ಹೆಜ್ಜೆಯಾಗಿದೆ.<br>• ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (SDMC), ಕರ್ನಾಟಕ ಶಿಕ್ಷಕರ ಸಂಘ, ಬಿಬಿಎಂಪಿ ಮತ್ತು ಆಯಾ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಅನೇಕ ಸ್ವ-ಸಹಾಯ ಗುಂಪುಗಳು ಮತ್ತು ಎನ್‌ಜಿಒಗಳು ಸಹಭಾಗಿತ್ವ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದಿಂದ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸಿ, ಶೈಕ್ಷಣಿಕ ಮುಖ್ಯವಾಹಿನಿಗೆ ತರಲಾಗುತ್ತದೆ.<br>• ಶಿಕ್ಷಣ ಇಲಾಖೆಯು EDCS, RDPR, BBMP ಮತ್ತು UDD ಇಲಾಖೆಗಳ ಸಹಯೋಗದೊಂದಿಗೆ 6-18 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಮನೆ-ಮನ ಸಮೀಕ್ಷೆಯನ್ನು ನಡೆಸಲು ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ. RTE 2009 ನಿಯಮ 6ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಪರಿಣಾಮಕಾರಿಯಾಗಿ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸಲು ಈ ಮೊಬೈಲ್ ಅಪ್ಲಿಕೇಶನ್ ಅನ್ನು ವಿನ್ಯಾಸಗೊಳಿಸಲಾಗಿದೆ.<br>• ಸಮೀಕ್ಷೆಯಲ್ಲಿ ಗುರುತಿಸಲಾದ ಬೀದಿ ಮಕ್ಕಳು, ಚಿಂದಿ ಆಯುವವರು, ಬಾಲ ಕಾರ್ಮಿಕರು, ಅನಾರೋಗ್ಯ ಪೀಡಿತ ಮಕ್ಕಳು, ವಿಶೇಷ ಅಗತ್ಯವಿರುವ ಮಕ್ಕಳು, ಅನಾಥರು, ಇತರ ರಾಜ್ಯಗಳು ಅಥವಾ ಜಿಲ್ಲೆಗಳಿಂದ ವಲಸೆ ಬಂದ ಮಕ್ಕಳಿಗೆ ವಿಶೇಷ ತರಬೇತಿ ನೀಡಿ ಕಲಿಕೆಯ ಮಟ್ಟವನ್ನು ಆಧರಿಸಿ ನೇತಾಜಿ ಅವಾಸಿಯ ವಿದ್ಯಾಲಯ, ಚಿಣ್ಣರ ತಂಗುಧಾಮ(Transit Homes), ಕೆಜಿಬಿವಿ ಶಾಲೆಗಳು, ಕೆಕೆಜಿಬಿವಿ(Hostels) ವಸತಿ ಶಾಲೆಗಳಲ್ಲಿ |

| | | |
|---|---|---|
| | | ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಇದು ಒಂದು ನಿರ್ಣಾಯಕ ಹೆಜ್ಜೆಯಾಗಿದೆ.<br>• ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (SDMC), ಕರ್ನಾಟಕ ಶಿಕ್ಷಕರ ಸಂಘ, ಬಿಬಿಎಂಪಿ ಮತ್ತು ಆಯಾ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಅನೇಕ ಸ್ವ-ಸಹಾಯ ಗುಂಪುಗಳು ಮತ್ತು ಎನ್‌ಜಿಒಗಳು ಸಹಭಾಗಿತ್ವ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದಿಂದ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸಿ, ಶೈಕ್ಷಣಿಕ ಮುಖ್ಯವಾಹಿನಿಗೆ ತರಲಾಗುತ್ತದೆ.<br>• ಶಿಕ್ಷಣ ಇಲಾಖೆಯು EDCS, RDPR, BBMP ಮತ್ತು UDD ಇಲಾಖೆಗಳ ಸಹಯೋಗದೊಂದಿಗೆ 6-18 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಮನೆ-ಮನ ಸಮೀಕ್ಷೆಯನ್ನು ನಡೆಸಲು ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ. RTE 2009 ನಿಯಮ 6ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಪರಿಣಾಮಕಾರಿಯಾಗಿ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸಲು ಈ ಮೊಬೈಲ್ ಅಪ್ಲಿಕೇಶನ್ ಅನ್ನು ವಿನ್ಯಾಸಗೊಳಿಸಲಾಗಿದೆ.<br>• ಸಮೀಕ್ಷೆಯಲ್ಲಿ ಗುರುತಿಸಲಾದ ಬೀದಿ ಮಕ್ಕಳು, ಚಿಂದಿ ಆಯುವವರು, ಬಾಲ ಕಾರ್ಮಿಕರು, ಅನಾರೋಗ್ಯ ಪೀಡಿತ ಮಕ್ಕಳು, ವಿಶೇಷ ಅಗತ್ಯವಿರುವ ಮಕ್ಕಳು, ಅನಾಥರು, ಇತರ ರಾಜ್ಯಗಳು ಅಥವಾ ಜಿಲ್ಲೆಗಳಿಂದ ವಲಸೆ ಬಂದ ಮಕ್ಕಳಿಗೆ ವಿಶೇಷ ತರಬೇತಿ ನೀಡಿ ಕಲಿಕೆಯ ಮಟ್ಟವನ್ನು ಆಧರಿಸಿ ನೇತಾಜಿ ಅವಾಸಿಯ ವಿದ್ಯಾಲಯ, ಚಿಣ್ಣರ ತಂಗುಧಾಮ(Transit Homes), ಕೆಜಿಬಿವಿ ಶಾಲೆಗಳು, ಕೆಕೆಜಿಬಿವಿ(Hostels) ವಸತಿ ಶಾಲೆಗಳಲ್ಲಿ |

| | | |
|---|---|---|
| | | ದಾಖಲಿಸಲಾಗುವುದು.<br>• ವಿಶೇಷ ಅಗತ್ಯವಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ಶಿಕ್ಷಕರ ಬೆಂಬಲವನ್ನು ಒದಗಿಸಲಾಗುತ್ತಿದೆ. ಅಂಗವೈಕಲ್ಯದ ಆಧಾರದ ಮೇಲೆ ವಿದ್ಯಾರ್ಥಿ ನಿರ್ದಿಷ್ಟ ಭತ್ಯೆಗಳಾದ ಸಾರಿಗೆ ಭತ್ಯೆ, ಬೆಂಗಾವಲು ಭತ್ಯೆ, ಓದುಗರ ಭತ್ಯೆ ಮತ್ತು ಹೆಣ್ಣು ಮಕ್ಕಳ ಭತ್ಯೆಯನ್ನು ಒದಗಿಸಲಾಗುತ್ತಿದೆ. ತೀವ್ರ ಅಂಗವೈಕಲ್ಯ ಅಥವಾ ತೀವ್ರ ಲೊಕೊ ಮೋಟಾರ್ ಅಂಗವೈಕಲ್ಯದ ಸಂದರ್ಭದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಅಗತ್ಯ ಕೌಶಲ್ಯ ತರಬೇತಿಯೊಂದಿಗೆ ಮನೆ ಆಧಾರಿತ ಶಿಕ್ಷಣವನ್ನು ಒದಗಿಸಲಾಗುವುದು.<br>• ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು "ವಲಸೆ ಮಕ್ಕಳು ಮತ್ತು ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣ ಹಕ್ಕು ನೀತಿ - 2019" ರೂಪಿಸಿದೆ. ಸದರಿ ನೀತಿಯನ್ನು ರಚಿಸಿರುವ ದೇಶದಲ್ಲಿ ಕರ್ನಾಟಕವು ಮೊದಲನೆಯ ರಾಜ್ಯವಾಗಿದೆ.<br>• ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಶಾಲೆ ಬಿಡುವ ಅವಧಿಯನ್ನು 60 ದಿನಗಳ ಬದಲಿಗೆ 7 ದಿನಗಳು ಎಂದು ಪರಿಗಣಿಸಲಾಗುತ್ತದೆ. ಪ್ರತಿ ಶೈಕ್ಷಣಿಕ ಬ್ಲಾಕ್‌ನಲ್ಲಿ 4 ರಿಂದ 5 ಹಾಜರಾತಿ ಅಧಿಕಾರಿಗಳನ್ನು (ಶಿಕ್ಷಣ ಸಂಯೋಜಕರು) ನೇಮಕ ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ 204 ಶೈಕ್ಷಣಿಕ ಬ್ಲಾಕ್‌ಗಳಿವೆ. ಪ್ರತಿಯೊಬ್ಬ ಹಾಜರಾತಿ ಅಧಿಕಾರಿಯು ಬ್ಲಾಕ್‌ನ ಅಡಿಯಲ್ಲಿರುವ ಶಾಲೆಗಳಿಗೆ ಜವಾಬ್ದಾರರಾಗಿರುತ್ತಾರೆ, ಶಾಲೆಯಲ್ಲಿ ಮಕ್ಕಳ ಹಾಜರಾತಿ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಾರೆ. RTE ನಿಯಮ 2009 6A, 68, 6C ಮತ್ತು 6D ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.<br>• 2024-25ನೇ ಸಾಲಿಗೆ, RTE ನಿಯಮ GA, GB, GC ಮತ್ತು GD ಪ್ರಕಾರ ರಾಜ್ಯದ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು, ಹಾಜರಾತಿ ಅಧಿಕಾರಿಗಳು (ಶಿಕ್ಷಣ ಸಂಯೋಜಕರು), ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ orientation ಕಾರ್ಯಕ್ರಮವನ್ನು ಒದಗಿಸಲಾಗಿದೆ. |

| | | |
|---|---|---|
| | | • ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ.<br>• ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು. ಕರ್ನಾಟಕದ ಘನ ಉಚ್ಚ ನ್ಯಾಯಾಲಯ ನಿರ್ದೇಶನಗಳ ಪ್ರಕಾರ ಜಂಟಿ ಅಂತರ ಇಲಾಖಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಅಡಿಯಲ್ಲಿ ಶಾಲಾ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಿಬಿಎಂಪಿ ಮತ್ತು ಕಾರ್ಮಿಕ ಇಲಾಖೆಗಳು ಸಮಿತಿಯಲ್ಲಿ ಸೇರಿರುತ್ತಾರೆ, ಸಮಿತಿಯು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಸಭೆ ನಡೆಯುತ್ತದೆ. ಸಭೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಚರ್ಚಿಸಲಾಗುವುದು.<br>• ಮಕ್ಕಳ ಹಾಜರಾತಿಯನ್ನು ಉತ್ತೇಜಿಸಲು, ಇಲಾಖೆಯು ವಿದ್ಯಾ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ, ಹಾಲು, ಮೊಟ್ಟೆ, ಬಾಳೆಹಣ್ಣು, ಪಠ್ಯ ಪುಸ್ತಕಗಳು, Work Book, ಟಿಎಲ್‌ಎಂ, ಶೂ-ಸಾಕ್ಸ್, ಎರಡು ಸೆಟ್ ಸಮವಸ್ತ್ರಗಳು ಮತ್ತು Vitamin ಮಾತ್ರೆಗಳು ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ.<br>• ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲು ಪ್ರತಿಭಾ ಕಾರಂಜಿ ಕಾರ್ಯಕ್ರಮದಡಿಯಲ್ಲಿ, ಶಾಲೆಗಳಲ್ಲಿರುವ ಎಲ್ಲಾ ಮಕ್ಕಳು ವಿವಿಧ ಹಂತಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ.<br>• ಆರ್‌ಟಿಇ, 2009 ರ ಪ್ರಕಾರ, ಸ್ಥಳೀಯ ಸಂಸ್ಥೆಗಳು ತಮ್ಮ ಮಿತಿಯಲ್ಲಿ ವಾಸಿಸುವ ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡುವ |

| | | |
|---|---|---|
| | | ಜವಾಬ್ದಾರಿಯನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಗ್ರಾಮಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು VER (ಗ್ರಾಮ ಶಿಕ್ಷಣ ನೋಂದಣಿ) / WER (ವಾರ್ಡ್ ಶಿಕ್ಷಣ ನೋಂದಣಿ) ಅನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿವೆ.<br>• ಪ್ರತಿ ವರ್ಷ ಶಿಕ್ಷಣ ಮಂತ್ರಾಲಯದಿಂದ PABಯಲ್ಲಿ ಅನುಮೋದಿತ ಕಾರ್ಯಕ್ರಮದ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು 3/6/9/12 ತಿಂಗಳ ವಸತಿರಹಿತ ಹಾಗೂ ವಸತಿ ಸಹಿತ ವಿಶೇಷ ತರಬೇತಿಗಳನ್ನು ಆಯೋಜಿಸಲಾಗುತ್ತದೆ.<br>• 16 ರಿಂದ 19 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ದಾಖಲಾಗದ ಮಕ್ಕಳಿಗೆ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಯ (NIOS) ಮೂಲಕ ಪರೀಕ್ಷೆಗೆ ನೋಂದಣಿ ಮಾಡಲು ಬ್ಲಾಕ್ ಹಂತದಲ್ಲಿ KPS ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳಲ್ಲಿ 220 ಅಧ್ಯಯನ ಕೇಂದ್ರಗಳನ್ನು ಗುರುತಿಸಲಾಗಿದೆ.<br>• ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸುವ, ದಾಖಲಿಸುವ ಮತ್ತು ಶೈಕ್ಷಣಿಕ ಮುಖ್ಯವಾಹಿನಿಗೆ ತರುವ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ. |

**ಇಪಿ 103 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ

ಸಚಿವರು